**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಲಯ**
ಕನಕಪುರ

**ಸಿ.ಸಿ.ನಂ.308/2019**

**:: ಆಪಾದನೆ ::**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್. ಎಲ್‌ಎಲ್.ಎಮ್., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕನಕಪುರ ಆದ ನಾನು

ಶ್ರೀ ಮುತ್ತುರಾಜು
ವಯಸ್ಸು 55 ವರ್ಷಗಳು
ವಾಸಃ ಜೆ.ಪಿ ನಗರ
ಬೆಂಗಳೂರು

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ಆಪಾದನೆ ಏನೆಂದರೆ :-

ಆರೋಪಿತರಾದ ನೀವು ಫಿರ್ಯಾದುದಾರರಿಗೆ ನೀಡಬೇಕಾಗಿದ್ದ ರೂ.5,00,000/- ಮೊತ್ತಕ್ಕೆ ದಿನಾಂಕಃ01.11.2018 ರ ಕೆನರಾ ಬ್ಯಾಂಕ್, ಸಾರಕ್ಕಿ ಬಡಾವಣೆ, ಬೆಂಗಳೂರು ಶಾಖೆಯ ರೂ.5,00,000-00 ರ ನಂ.963702 ರ ಒಂದು ಚೆಕ್ಕನ್ನು ಫಿರ್ಯಾದುದಾರರಿಗೆ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ನಗದೀಕರಣಕ್ಕಾಗಿ ಕರ್ನಾಟಕ ಬ್ಯಾಂಕ್, ಕನಕಪುರ ಶಾಖೆಯ ಮುಖಾಂತರ ಹಾಜರುಪಡಿಸಿದಾಗ, ಆರೋಪಿತರಾದ ನಿಮ್ಮ ಖಾತೆಯಲ್ಲಿ **"ಸಾಕಷ್ಟು ಹಣವಿಲ್ಲ"** ಎಂದು ದಿನಾಂಕಃ18.12.2018ರಂದು ಹಿಂಬರಹ ನೀಡಿದ್ದು, ಆ ಮೂಲಕ ಸದರಿ ಚೆಕ್ಕು ಅಮಾನ್ಯಗೊಂಡು ವಾಪಸ್ಸು ಬಂದಿದ್ದು, ನಂತರ ದಿನಾಂಕಃ18.01.2019ರಂದು ಫಿರ್ಯಾದಿಯು ತನ್ನ ವಕೀಲರ ಮೂಲಕ ನೋಟಿಸ ನೀಡಿದ್ದು, ಅದು ನಿಮಗೆ ತಲುಪಿದರು ಕೂಡಾ ನೀವು ಕೊಡಬೇಕಾದ ಸಾಲದ ಹಣವನ್ನು ಕೊಡದೇ ಇರುವುದರ ಮೂಲಕ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ ೧೩೮ ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಈ ಮೇಲೆ ತಿಳಿಸಿದ ಆಪಾದನೆಗೆ ನೀವು ಗುರಿಯಾಗಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಪ್ರಶ್ನೆ (೧) ಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ- ಹೌದು

ಪ್ರಶ್ನೆ(೨) ಃ ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರಃ- ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ, ಕನಕಪುರ.**